**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**<u>ಫೌಜುದಾರಿ ಪ್ರಕರಣ ಸಂಖ್ಯೆ : 89/2020</u>**

**ಚಾ.ಸಾಃ 24, ಫ್ರಾ.ಸಾಃ 09**

| | |
|---|---|
| ಸಾಕ್ಷಿದಾರನ ಹೆಸರು | ವಸಂತ ಆಚಾರ್ |
| ತಂದೆಯ ಹೆಸರು | ರಾಮಾ ಆಚಾರ್ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**<u>ಸಾಕ್ಷಿಯನ್ನು ದಿನಾಂಕಃ 17-08-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎಪಿಪಿಯವರಿಂದ,</u>**

ನಾನು ದಿನಾಂಕ 25-09-2019 ರಿಂದ ದಿನಾಂಕ 03-10-2020 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **02-01-2020** ರಂದು ಚಾಸಾ-23 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ 31-07-2021 ರಂದು ಸಿಬ್ಬಂದಿಯೊಂದಿಗೆ ಕಡತೋಕಾ ಜಡ್ಡಿಗದ್ದೆ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಂದಾವರ ಕಡೆಯಿಂದ ಮೋಟಾರು ಸೈಕಲ್ಲಿನಲ್ಲಿ 2 ಜನ ಬರುತ್ತಿದ್ದು ಅವರನ್ನು ಹಿಡಿದು ವಿಚಾರಿಸಲಾಗಿ ಅವರು ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಅವರನ್ನು ಠಾಣೆಗೆ ಕರೆತಂದು ಹೆಸರು, ವಿಳಾಸ ವಿಚಾರಿಸಲಾಗಿ ಅವರು ಸಜ್ಜದ್ ಅಹ್ಮದ್ ತಂದೆ ಕುತುಬುದ್ದಿನ್ ಗಣಿ ಮತ್ತು ಮುಬಾಶಿರ್ ಕುತುಬುದ್ದಿನ್ ಗಣಿ, ಚಂದಾವರ ಎಂದು ತಿಳಿಸಿರುತ್ತಾರೆ. ಸಂಶಯದಿಂದ ಅವರನ್ನು ಕೂಲಂಕುಷವಾಗಿ ವಿಚಾರಿಸಲಾಗಿ ಅವರು ಈ ಪ್ರಕರಣದಲ್ಲಿ ಕಳುವು ಮಾಡಿರುವುದನ್ನು ಒಪ್ಪಿಕೊಂಡು ಸ್ವ ಖುಷಿ ಹೇಳಿಕೆಯನ್ನು ನೀಡಿರುತ್ತಾರೆ. ಅವರು ತಮ್ಮ ಹೇಳಿಕೆಯಲ್ಲಿ ಈ ಪ್ರಕರಣ ಅಲ್ಲದೇ ಇತರೇ 8 ಪ್ರಕರಣಗಳಲ್ಲಿ ತಾವು ಕಳುವು ಮಾಡಿರುವುದಾಗಿ ತಿಳಿಸಿರುತ್ತಾರೆ. ಆರೋಪಿತರು ತಾವು ಕಳುವು ಮಾಡಿರುವ ಸ್ಥಳವನ್ನು ಮತ್ತು ಮಾಲಿನ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 31-12-2019 ರ ಮಧ್ಯರಾತ್ರಿಯಲ್ಲಿ ಹೊದ್ಕೆಶಿರೂರಿನ ಹೂವಿನಹಿತ್ಲದ ಒಂದು ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ಮತ್ತು ಸದರಿ ಮನೆಯಿಂದ 4 ಉಂಗುರಗಳು, ಚೈನು, ಬಳೆ ಹಾಗೂ ನಗದು ಹಣ ಕಳುವು ಮಾಡಿರುವುದಾಗಿ ಹೇಳಿರುತ್ತಾರೆ. ಅಲ್ಲದೇ ಕಳುವು ಮಾಡಿದ ಬಂಗಾರದ ಆಭರಣಗಳನ್ನು ಹಂತ ಹಂತವಾಗಿ ಮಣಪುರಂ ಫೈನಾನ್ಸನಲ್ಲಿ ಗಿರವಿ ಇಟ್ಟಿರುವುದಾಗಿ ಹಣವನ್ನು ಖರ್ಚು ಮಾಡಿರುವುದಾಗಿ ಹೇಳಿರುತ್ತಾರೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿರುತ್ತೇನೆ.

ದಿನಾಂಕ 01-08-2021 ರಂದು ಆರೋಪಿತರ ಸ್ವ ಖುಷಿ ಹೇಳಿಕೆಯಲ್ಲಿ ಕಳುವು ಆಭರಣಗಳನ್ನು ಕುಮಟಾದ ಮಣಪುರಂ ಫೈನಾನ್ಸನಲ್ಲಿ ಗಿರವಿ ಇಟ್ಟಿರುವುದಾಗಿ ಮತ್ತು ಅದನ್ನು

ತೋರಿಸುವುದಾಗಿ ಹೇಳಿದ್ದರಿಂದ ಚಾಸಾ-4 ಮತ್ತು 5 ರವರನ್ನು ಠಾಣೆಗೆ ಕರೆಸಿಕೊಂಡು ಅವರಿಗೆ ಮಾಹಿತಿ ತಿಳಿಸಿ ಅವರು ಪಂಚರಾಗಿ ಬರಲು ಒಪ್ಪಿಕೊಂಡಿದ್ದರಿಂದ ನಾನು, ಸಿಬ್ಬಂದಿ ಮತ್ತು ಪಂಚರೊಡನೆ ಕುಮಟಾಕ್ಕೆ ಹೋಗಿದ್ದು ಅಲ್ಲಿ ಆರೋಪಿತರು ನಮ್ಮನ್ನು ಕುಮಟಾದ ಮಣಪುರಂ ನ ಮುಖ್ಯ ಶಾಖೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಮ್ಯಾನೇಜರರವರನ್ನು ವಿಚಾರಣೆ ಮಾಡಲಾಗಿ ಅವರು ಆರೋಪಿತರನ್ನು ಗುರುತಿಸಿ ಒಡವೆಗಳನ್ನು ಗಿರವಿ ಇಟ್ಟಿರುವುದನ್ನು ಒಪ್ಪಿ 9.750 ಗ್ರಾಂ ತೂಕದ 4 ಬಂಗಾರದ ಉಂಗುರಗಳು, ಸುಮಾರು ಒಟ್ಟೂ 31.2 ಗ್ರಾಂ ತೂಕದಷ್ಟು 3 ಚೈನಗಳು, ಸುಮಾರು 9.9 ಗ್ರಾಂ ತೂಕದ ಒಂದು ಬಳೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 11-15 ರಿಂದ 12-00 ಗಂಟೆ ಸಮಯದಲ್ಲಿ ತಯಾರಿಸಿರುತ್ತೇನೆ. ಆ ಸಮಯಕ್ಕೆ ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ನಿಪಿ-17 ಎಂದು, ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಚಾಸಾ-10 ಮತ್ತು 11 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಠಾಣೆಗೆ ಬಂದು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಪಿಎಫ್‌ನಲ್ಲಿ ನಮೂದಿಸಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**